# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 47/2024

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಡಾ. ಭಾವನಾ | ಪ್ರಾಸಾಃ | 10 |
| **ಗಂಡನ ಹೆಸರುಃ** | ಗಿರೀಜೇಶ | ಚಾಸಾಃ | 11 |
| **ವಯಸ್ಸುಃ** | 34 | ಪ್ರಮಾಣ ವಚನ ಭೋದಿಸಿದ ದಿನಾಂಕ: | 03-09-2025 |
| **ಉದ್ಯೋಗಃ** | ವೈದ್ಯಾಧಿಕಾರಿ | | |
| **ವಾಸ ಸ್ಥಳಃ** | ಶಿಡ್ಲಘಟ್ಟ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ದಿ.*23.06.2023* ರಂದು ನಾನು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ದಿಬ್ಬೂರಹಳ್ಳಿ ಪೋಲಿಸ್ ಠಾಣೆಯಿಂದ ಮಹಿಳಾ ಪೇದೆಯೊಬ್ಬರು ಸಂತ್ರಸ್ಥೆ ಎಂಬಾಕೆಯನ್ನು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಬಗೆ ಪರೀಕ್ಷೆ ನಡೆಸಿ ವರದಿ ನೀಡುವಂತೆ ಕೋರಿಕೊಂಡ ಹಿನ್ನಲೆಯಲ್ಲಿ ಮದ್ಯಾಹ್ನ *12.00* ಸುಮಾರಿಗೆ ಆಕೆಯನ್ನು ಪರೀಕ್ಷೆಗೆ ಒಳಪಡಿಸಿದ್ದು , ಆಕೆಯನ್ನು ವಿಚಾರಿಸಲಾಗಿ *2* ವರ್ಷದ ಹಿಂದೆ ದಾವೂದ್ ಪಾಶಾ ಎಂಬಾತ ಕಿತ್ತಳೆ ಹಣ್ಣಿನ ರಸ ನೀಡಿ ತನಗೆ ಪ್ರಜ್ಞೆ ತಪ್ಪಿಸಿದ್ದು , ಅರ್ಧ ಗಂಟೆಯ ಬಳಿಕ ಎಚ್ಚರವಾದಾಗ ಆಕೆಯ ಬಟ್ಟೆಗಳನ್ನು ತೆಗೆಯಲಾಗಿದ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಹಾಗೂ ಆಕೆಯ ಬೆತ್ತಲೆ ಪೋಟೊಗಳನ್ನು ತೆಗೆದು ಬೆದರಿಸುತ್ತಿದ್ದಾನೆ ಎಂದು ವಾರಕ್ಕೆ *2-3* ಬಾರಿ ಇದೇ ರೀತಿ ಲೈಂಗಿಕ ದೌರ್ಜನ್ಯ ಎಸಗಿ ಹಣ ದೋಚಿಕೊಂಡು ಹೋಗಿದ್ದಾನೆ ಎಂದು

*15.05.2023* ರಂದು ಕೊನೆಯದಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾಗಿ ಪುನಃ *10.06.2023* ರಂದು ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಬಂದಾಗ ತಾನು *2* ತಿಂಗಳ ಗರ್ಭಿಣಿಯಾಗಿರುವುದಾಗಿ ಹೇಳಿಕೊಂಡರು ಸಹ ಆರೋಪಿ ಆಕೆಯ ಹೊಟ್ಟೆಗೆ ಒದ್ದು , ಕೆಳಗೆ ಬೀಳಿಸಿ ಹಲ್ಲೆ ಮಾಡಿದ್ದು , ಇದರಿಂದ ರಕ್ತ ಸ್ರಾವವಾಗಿ ಮಣಿ ವೆಂಕಟರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿಯೂ ಮಾಹಿತಿ ನೀಡಿದ್ದರು. ದಿ.*11.06.2023* ರಂದು ಆಕೆಗೆ ಸಕ್ಕರೆ ಖಾಯಿಲೆಗೆ ಚಿಕಿತ್ಸೆ ನೀಡಲಾಗಿದೆ ಎಂದು ಪುನಃ *17.06.2023* ರಂದು ಆರೋಪಿ ಸಂತ್ರಸ್ಥೆಯ ಮನೆಗೆ ಬಂದು ಆಕೆಯಿಂದ ಹಣ ದೋಚಿ ಆಕೆಗೆ ನಿದ್ರೆ ಮಾತ್ರೆಯನ್ನು ಕೊಟ್ಟು ಅದನ್ನು ತನ್ನ ಗಂಡನಿಗೆ ಹಾಕಿ ಸಾಯಿಸಲು ಹೇಳಿರುವುದಾಗಿಯೂ ಇದರಿಂದ ಭಯಗೊಂಡ ಆಕೆ ಈ ವಿಚಾರ ಗಂಡನಿಗೆ ತಿಳಿಸಿ ಪೋಲಿಸ್ ದೂರು ಕೊಟ್ಟಿರುವುದಾಗಿ ಮಾಹಿತಿ ನೀಡಿದ್ದಳು.

ಕ್ಲಿನಿಕಲ್ ಪರೀಕ್ಷೆಯ ನಂತರ ಆಕೆಯ ಮೈ ಮೇಲೆ ಕಾಣುವಂತಹ ಯಾವುದೇ ಗಾಯಗಳು ಇರಲಿಲ್ಲ. ಹೈಮನ್ ಹರಿದು ಹೋಗಿತ್ತು. ಜನನಾಂಗಗಳು ಸಮ ಸ್ಥಿತಿಯಲ್ಲಿದ್ದವು. ಪೋಲಿಸರ ಕೋರಿಕೆಯ ಮೇರೆಗೆ ಆಕೆಯ ಜನನಾಂಗದಿಂದ ಕೂದಲು , ಸ್ವಾಬ್ ಗಳು , ಉಗುರು , ರಕ್ತದ ಮಾದರಿ ಇವುಗಳನ್ನು ಶೇಖರಿಸಿ ತನಿಖಾಧಿಕಾರಿಗೆ ಹಸ್ತಾಂತರಿಸಲಾಗಿತ್ತು. ಆಕೆಯನ್ನು ಪರೀಕ್ಷಿಸಿದ ನಂತರ ನನ್ನ ಅಭಿಪ್ರಾಯದಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಆಗಿರುವ ಸಾಧ್ಯತೆ ಇದ್ದು ಎಫ್.ಎಸ್.ಎಲ್ ವರದಿ ಆಧಾರದಲ್ಲಿ ಅಂತಿಮ ಅಭಿಪ್ರಾಯ ನೀಡಿರುವುದಾಗಿ ಹೇಳಿ ವೈದ್ಯಕೀಯ ಪ್ರಮಾಣ ಪತ್ರ ನಿಪಿ-*10* ರಂತೆ ನೀಡಿರುತ್ತೇನೆ. ಸಂತ್ರಸ್ಥೆಯಿಂದ ಮಾದರಿಗಳು ಸಂಗ್ರಹಿಸಿದ್ದು ಈಗ ನೋಡುತ್ತಿದ್ದು ಮು.ಮಾ.*08* ರಿಂದ *18*

ಎಂದು ಗುರುತಿಸಲಾಯಿತು. ನಿಪಿ-*10(ಎ)* ನನ್ನ ಸಹಿ. ನಂತರ ತನಿಖಾಧಿಕಾರಿಯವರು ಎಫ್.ಎಸ್.ಎಲ್ ವರದಿ ಹಾಜರುಪಡಿಸಿದ್ದು, ಅದರಂತೆ ಸಂತ್ರಸ್ಥೆಯ ಮೇಲೆ ಯಾವುದೇ ವೀರ್ಯಾಣುಗಳು ಕಂಡುಬಂದಿರುವುದಿಲ್ಲ . ಹೀಗಾಗಿ ನನ್ನ ಅಭಿಪ್ರಾಯದಂತೆ ಸಂತ್ರಸ್ಥೆಯ ಮೇಲೆ ಹತ್ತಿರದಲ್ಲಿ ಯಾವುದೇ ಲೈಂಗಿಕ ಕ್ರಿಯೆ ನಡೆದಿಲ್ಲವೆಂದು ಹಾಗೂ ಆರೋಪಿಯಿಂದ ಲೈಂಗಿಕ ಕ್ರಿಯೆ ನಡೆದಿರಬಹುದಾದ ಸಾಧ್ಯತೆಯಿದೆ ಎಂದು ನಿಪಿ-*11* ರಂತೆ ಅಭಿಪ್ರಾಯ ನೀಡಿರುತ್ತೇನೆ. ನಿಪಿ-*11(ಎ)* ನನ್ನ ಸಹಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ03.09.2025 **(ಕೆ.ಎಂ.ರಾಜಶೇಖರ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

**ದಿನಾಂಕಃ 05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎ.ಕೆ.ವಕೀಲರಿಂದಃ</u>**

ಪ್ರಾಸಾ-1 ರವರು ಹೊರರೋಗಿಯಾಗಿ ಆಸ್ಪತ್ರೆಗೆ ಬಂದಿದ್ದರು. ನಿಪಿ-10 ರೊಂದಿಗೆ ಹೊರರೋಗಿಯ ಕಾರ್ಡ್‌ನ್ನು ನೀಡಿರುವುದಿಲ್ಲ, ಆದರೆ ಹೊರರೋಗಿಯ ನಂಬರ್ ನ್ನು ನಮೂದು ಮಾಡಿರುತ್ತೇನೆ. ಪ್ರಾಸಾ-1 ರವರನ್ನು ಪರೀಕ್ಷೆಗೆ ಒಳಪಡಿಸಿದಾಗ ಆಕೆಯ ಸಮ್ಮತಿಯನ್ನು ಪಡೆದಿರುತ್ತೇನೆ. ಪ್ರಾಸಾ-1 ರವರು ನನಗೆ ಇತಿಹಾಸವನ್ನು ಕನ್ನಡ ಭಾಷೆಯಲ್ಲಿ ನೀಡಿರುತ್ತಾರೆ. ಪ್ರಾಸಾ-1 ರವರ ಹೊಟ್ಟೆಯ ಮೇಲೆ ಯಾವುದೇ ಗಾಯದ ಕುರುಹುಗಳು ಇರಲಿಲ್ಲ. ಸಾಕ್ಷಿಗೆ ಸಾಮಾನ್ಯವಾಗಿ ಗರ್ಭಿಣಿ ಹೆಂಗಸಿನ ಹೊಟ್ಟೆಗೆ ಹಲ್ಲೆ ಮಾಡಿದರೆ ಹೆಚ್ಚಿನ ರಕ್ತಸ್ರಾವ 48 ಗಂಟೆಗಳ ಒಳಗೆ ಆಗುತ್ತದೆ. ಮೈನರ್ ರಕ್ತಸ್ರಾವ 5 ದಿನಗಳವರೆಗೂ ಇರುತ್ತದೆ. ನಾನು ಪ್ರಾಸಾ-1 ರವರನ್ನು ಪರೀಕ್ಷಿಸಿದಾಗ ಆಕೆಗೆ ಗರ್ಭಪಾತ ಆದ ಬಗ್ಗೆ ಯಾವುದೇ ಚಿಹ್ನೆಗಳು ಇರಲಿಲ್ಲ. 22-12-2023 ರಂದು ಎಫ್.ಎಸ್.ಎಲ್ ವರದಿ ನನಗೆ ಪೋಲಿಸರು ನೀಡಿದ್ದರು. ಎಫ್.ಎಸ್.ಎಲ್ ವರದಿ Negative ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಸ್ತು ಸಂಖ್ಯೆ.18 ಪ್ರಾಸಾ-1 ರವರಿಗೆ ಸಂಬಂಧಿಸಿದ್ದಲ್ಲ.

ಫ್ರಾಸಾ-1 ರವರಿಗೆ ಸಂಬಂಧಿಸಿದ ವಸ್ತುಗಳಲ್ಲಿ Seminal stains ಹಾಗೂ Spermatozoa ಕಂಡುಬಂದಿರುವುದಿಲ್ಲ. ಪೋಲಿಸರ ಕೋರಿಯ ಪತ್ರದಲ್ಲಿ ಕೇಸಿನ ಸಂಪೂರ್ಣ ವಿವರ ನೀಡಿರುತ್ತಾರೆ ಎಂದರೆ ಸರಿಯಲ್ಲ. Seminal stains 48 ಗಂಟೆಗಳ ವರೆಗೆ ಇರುತ್ತದೆ. ಆ 48 ಗಂಟೆಗಳ ಒಳಗೆ ಫ್ರಾಸಾ-1 ರವರಿಗೆ ಲೈಂಗಿಕ ಕ್ರಿಯೆ ಆಗಿರುವುದಿಲ್ಲ ಎಂದು ಅಭಿಪ್ರಾಯ ನೀಡಿರುತ್ತೇನೆ. ಆ ರೀತಿಯಾಗಿ ನಾನು ವರದಿಯಲ್ಲಿ ಬರೆದಿರುವುದಿಲ್ಲ. ನಾನು ಪೋಲಿಸರು ನೀಡಿದ್ದ ಕೋರಿಯ ಪತ್ರದಲ್ಲಿ ಕೇಸಿನ ಬಗ್ಗೆ ವಿವರ ನೀಡಿದ್ದು ಅದರಂತೆ ನಾನು ನನ್ನ ವರದಿಯಲ್ಲಿ ಫ್ರಾಸಾ-1 ರವರ ಮೇಲೆ ಲೈಂಗಿಕ ಅತ್ಯಾಚಾರ ಆರೋಪಿಯಿಂದ ಆಗಿಲ್ಲ ಎಂದು ಹೇಳಲು ಬರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ಕ್ಕೆ ಚೀಟಿಯನ್ನು ಪೋಲಿಸರೇ ಅಂಟಿಸಿರುತ್ತಾರೆ. ನಾನು ಸಹಿ ಮಾಡಿರುತ್ತೇನೆ. ನನ್ನ ಸಹಿಯ ಕೆಳಗೆ ದಿನಾಂಕ ನಮೂದು ಮಾಡಲು ತೊಂದರೆ ಇರಲಿಲ್ಲ. ನಾನು ಫ್ರಾಸಾ-1 ರವರಿಂದ ಯಾವುದೇ ವಸ್ತುಗಳನ್ನು ಪಡೆದುಕೊಂಡಿಲ್ಲ, ಪೋಲಿಸರು ತೆಗೆದುಕೊಂಡು ಬಂದಂತಹ ವಸ್ತುಗಳ ಮೇಲೆ ಸಹಿ ಮಾಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಫ್ರಾಸಾ-1 ರವರನ್ನು ಪರೀಕ್ಷಿಸಿರಲಿಲ್ಲ. ಪೋಲಿಸರು ಕೊಟ್ಟಂತಹ ಕೋರಿಯ ಪತ್ರದ ಆಧಾರದ ಮೇಲೆ ವರದಿ

ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ05.03.2026 ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ *(ಕಾರ್ಯಸ್ಥಾನ ಚಿಂತಾಮಣಿ)***